# ನವಿಲುಗನ್ನಡಿ




- ಆಗಸ್ಟ್ ಸಂಚಿಕೆಯ ಮುಖಪುಟದಲ್ಲಿ ಮುದ್ದು ಮುಖದ ಮಗುವಿನ ಚಿತ್ರ ಗಮನ ಸೆಳೆಯಿತು. 'ಹೀಚಿನಲ್ಲೇ ಬಿದ್ದುಹೋಗುವ ನಚಿಕೇತಸ್ಸುಗಳು' ಎನ್. ಸಿ. ಮಹೇಶ್ ಅವರ ಕಥೆ ಚೆನ್ನಾಗಿದೆ. ಟಿ.ಆರ್. ಉಷಾರಾಣಿ ಅವರ 'ಗೂಡು ತೊರೆದ ಹಕ್ಕಿ' ಕಥೆ ಮನ ಕಲಕುವಂತಿದೆ.

**ನೀಲಮ್ಮ ಲಿಂಗಸೂರು, ರಾಯಚೂರು**
**ಶಂಕರನಾರಾಯಣ ಭಟ್, ಮಾಡಗೇರಿ**

- ಮುಖಪುಟದ ಪುಟ್ಟನ ಕಣ್ನೋಟ ಕಣ್ಸೆಳೆಯಿತು. ಮುಗ್ಧತೆ, ಕುತೂಹಲಗಳೇ ಆಭರಣಗಳಂತಿರುವ ಮಗುವಿನ ಚಿತ್ರ ಪದೇಪದೇ ನೋಡುವಂತಿದೆ.

**ಸುಶೀಲಾ ಆರ್. ರಾವ್, ಉಡುಪಿ**
**ರವಿ ಯಲಿಗಾರ, ಮುನವಳ್ಳಿ**

- ಲಲಿತ ಮಂಟಪದೊಂದಿಗೆ ಕೈ ಸೇರಿದ ಆಗಸ್ಟ್ ಸಂಚಿಕೆಯ ಮುಖಪುಟ ಚಿತ್ರದಲ್ಲಿರುವ ಮಗುವಿನ ಕಣ್ಣ ನೋಟ ಕಾಡುವಂತಿದೆ. ಈ ಸಂಚಿಕೆಯ ಕವಿತೆಗಳೆಲ್ಲವೂ ಸೊಗಸಾಗಿವೆ.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**

- ಪ್ರಕಾಶ ಕಂದಕೂರ ಅವರ ಮುಖಪುಟ ಚಿತ್ರ ಹಿಡಿಸಿತು. 'ಲಲಿತ ಮಂಟಪ'ದಲ್ಲಿ ಸಾಹಿತ್ಯವಲ್ಲದೇ, ಸಾಂಸ್ಕೃತಿಕ ಕಲಾ ಪ್ರಕಾರಗಳ ಕಲಾವಿದರನ್ನು ಪರಿಚಯಿಸುವ ಪ್ರಜ್ಞಾಪೂರ್ವಕ ಪ್ರಯತ್ನ ಸಫಲವಾಗಿದೆ ಅಂತಲೇ ಅನ್ನಬೇಕು. ಎಚ್.ಎಸ್. ರಾಘವೇಂದ್ರ ಅವರ 'ಪ್ರೀತಿಯ ಕೊಳಲು ಮತ್ತು ಎಚ್ಚರಿಕೆಯ ಘಂಟೆ' ಚೆನ್ನಾಗಿ ಮೂಡಿಬಂದಿದೆ.

**ಶಂಕರನಾರಾಯಣ ಭಟ್, ಹೊನ್ನಾವರ**

- ಒಡಿಸ್ಸಿ ನೃತ್ಯ ಕಲಾವಿದ ರಾಮ್ಲಿ ಇಬ್ರಾಹಿಂ ಸಂದರ್ಶನ (ಕೋಡಿಬೆಟ್ಟು ರಾಜಲಕ್ಷ್ಮಿ) ಇಷ್ಟವಾಯಿತು. ಅವರ ಆತ್ಮವಿಶ್ವಾಸದ ಮಾತುಗಳು ಸ್ಫೂರ್ತಿದಾಯಕವಾಗಿದ್ದವು.

**ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ**

- ಈ ಸಂಚಿಕೆಯಲ್ಲಿನ ಕಥೆಗಳ ಹೂರಣ ಸಾಹಿತ್ಯಪ್ರಿಯರಿಗೆ ರಸದೌತಣವನ್ನೆ ನೀಡಿತು. ಕವಿತೆಗಳು ಗಮನ ಸೆಳೆದವು. ಡಾ. ಲಕ್ಷ್ಮಣ ವಿ.ಎ. ಅವರ 'ಬಂಡೆ ಬಸಪ್ಪನ ದೊಡ್ಡಿ' ಕಥೆ ಹಿಡಿಸಿತು.

**ಮಾರುತಿ ಗೋಪಿಕುಂಟೆ, ಸಿರಾ**
**ಸಿ.ಕೆ.ಗಣಪ್ಪನವರ, ಡಂಬಳ**

- ರವಿ ಪಾಟೀಲ್ ಅವರ 'ಪುನರುತ್ಥಾನ' ಕವಿತೆ ಮನಸ್ಸಿಗೆ ಮುದ ನೀಡಿತು. ಖಿನ್ನತೆ ಮತ್ತು ನಿರಾಸೆಯಂತಹ ಭಾವನೆಗಳನ್ನು ಕವಿ ಚೆನ್ನಾಗಿ ವ್ಯಕ್ತಪಡಿಸಿದ್ದಾರೆ.

**ಅನಿಲಕುಮಾರ ವಾಳುಜಕರ, ಮುಂಬೈ**

- 'ಹಾರುವ ಹಾವಿನ ಹುಡುಕಾಟ' ಕಲೀಮ್ ಉಲ್ಲಾ ಅವರ ಬರಹ ಈವರೆಗೂ ಗೊತ್ತಿರದ ಉರಗ ಜಗತ್ತಿನ ರೋಚಕ ಅನುಭವವನ್ನು ನೀಡಿತು. ಬೇಂದ್ರೆಯವರ 'ಶ್ರಾವಣ' ಕವಿತೆಯೊಂದನ್ನು ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದೆ. ಅದರಲ್ಲಿ 'ಕುಣಿವ ಮಣಿವ ಹೆಡೆಯ ಹಾವುಗಳನು ಹಿಡಿದು ತಂದೆಯಾ!' ಎನ್ನುವ ಸಾಲುಗಳಿವೆ. ಅವುಗಳ ಒಳನೋಟವನ್ನು ವಿಸ್ತರಿಸಲು ಈ ಲೇಖನ ಪೂರಕವಾಯಿತು. ಅವರ ಬರವಣಿಗೆಯ ಆಪ್ತತೆ, ಸಾಹಸಮಯ ಫೋಟೊಗ್ರಫಿ, ಜೀವ ಸಂಕುಲದ ಕೌತುಕಗಳನ್ನು ಬೆರಗುಗಣ್ಣುಗಳಿಂದ ನೋಡುವವರಲ್ಲಿ ನಾನೂ ಒಬ್ಬ.

**ನಾಗರಾಜ ಮಗ್ಗದ, ಬೋರನಹಳ್ಳಿ**

- ಮಾಧವಿಲತಾ (ಮೂಲ: ಚಿತ್ರಾ ಲಹರಿ ಕನ್ನಡಕ್ಕೆ: